**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ.768/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅರುಣ್ ಹೆಚ್.ಎನ್ | ಸಿ.ಡಬ್ಲ್ಯೂ-5 |
| ತಂದೆಯ ಹೆಸರು / ಗಂಡನ ಹೆಸರು | : | ನಾಗರಾಜು | ಪಿ.ಡಬ್ಲ್ಯೂ-4 |
| ವಯಸ್ಸು | : | 36 ವರ್ಷ | - |
| ಉದ್ಯೋಗ | : | ಮುಖ್ಯ ಪೇದೆ, ಹುಣಸೂರು ನಗರ ಪೊಲೀಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **15.02.2024.** |
| ವಾಸಸ್ಥಳ | : | ಹುಣಸೂರು ಪೊಲೀಸ್ ವಸತಿ ಗೃಹ | - |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ 2013 ರಿಂದ 2019 ರವರೆಗೆ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04.03.2017 ರಂದು ನಾನು ಠಾಣೆಯಲ್ಲಿರುವಾಗ ಚಾಸಾ-1 ರವರು ನನಗೆ ಮತ್ತು ಚಾಸಾ-4, 6 ರವರನ್ನು ಕರೆದು ಹೆಚ್.ಡಿ.ಕೋಟೆ ವೃತ್ತ ನಿರೀಕ್ಷಕರು ದೂರವಾಣಿ ಮುಖಾಂತ ಮಾಹಿತಿ ತಿಳಿಸಿದ್ದು, ಮಾಹಿತಿ ಏನೆಂದರೆ, ಠಾಣಾ ವ್ಯಾಪ್ತಿಯ ಎನ್.ಬೇಗೂರು ಗ್ರಾಮದಲ್ಲಿ ಸೋಮಣ್ಣ ಬಿನ್ ಲೇ.ಹನುಮಯ್ಯ ಎಂಬುವವರು ಅವರ ಮನೆಯ ಬಳಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿರುತ್ತೇನೆ. ದಾಳಿ ಮಾಡಲು ಹೋಗೋಣ ಬನ್ನಿ ಎಂದು ನಮ್ಮಗಳ ಜೊತೆಯಲ್ಲಿ ಪಂಚರುದಾರರಾದ ಚಾಸಾ-2 ಮತ್ತು 3 ರವರಿಗೆ ಮಾಹಿತಿ ತಿಳಿಸಿ ಅವರು ಪಂಚರುದಾರರಾಗಿ ಬರಲು ಒಪ್ಪಿಕೊಂಡ ಮೇರೆಗೆ ಅವರನ್ನು ಕರೆದುಕೊಂಡು ನಮ್ಮ ಇಲಾಖಾ ಜೀಪಿ ನಂ. ಕೆಎ-55 ಜಿ 401 ರಲ್ಲಿ ಎನ್.ಬೇಗೂರು ಗ್ರಾಮದ ಸೋಮಣ್ಣ ಬಿನ್ ಲೇ.ಹನುಮಯ್ಯರವರ ಮನೆಯ ಬಳಿ ಮಧ್ಯಾಹ್ನ 3.00 ಗಂಟೆಗೆ ಹೋದಾಗ ಅಲ್ಲಿ ಮೂರು ಜನ ಮದ್ಯಪಾನ ಮಾಡುತ್ತಾ ನಿಂತಿದ್ದರು. ಆರೋಪಿಯು ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದನು. ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಮದ್ಯವನ್ನು ಕುಡಿಯುತ್ತಾ ನಿಂತಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಆರೋಪಿಯು ಓಡಿ ಹೋಗಲು ಪ್ರಯತ್ನ ಮಾಡಿದಾಗ ನಾವು ಆತನನ್ನು ಸುತ್ತುವರಿದು ಹಿಡಿದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಸೋಮಣ್ಣ ಬಿನ್ ಲೇ.ಹನುಮಯ್ಯ, ಎನ್.ಬೇಗೂರು ಗ್ರಾಮ ಎಂದು ತಿಳಿಸಿರುತ್ತಾನೆ.

ನಂತರ ಪಂಚರ ಸಮಕ್ಷಮ ಆತನ ಬಳಿ ಇದ್ದ ಬಿಳಿ ಪ್ಲಾಸ್ಟಿಕ್ ಚೀಲವನ್ನು ಪರಿಶೀಲನಿ ಮಾಡಿ ನೋಡಲಾಗಿ 90 ಎಂ.ಎಲ್ ನ ವಿಂಡ್ಸರ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು, 90 ಎಂ.ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 22 ಟೆಟ್ರಾ ಪ್ಯಾಕೆಟುಗಳು ಇರುವುದು ಕಂಡುಬಂದಿರುತ್ತದೆ. ಅದೇ ಸಮಯದಲ್ಲಿ ಚಾಸಾ-1 ರವರು ಆರೋಪಿಯನ್ನು ಮದ್ಯ ಮಾರಾಟ ಮಾಡಲು ಪರವಾನಗಿ ಇದೆಯಾ ಎಂದು ಕೇಳಿದಾಗ ಆರೋಪಿಯು ನನ್ನ ಬಳಿ ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ಘಟನಾ ಸ್ಥಳದಲ್ಲಿ ಮಧ್ಯಾಹ್ನ 3.00 ರಿಂದ 4.00 ಗಂಟೆಯ ವರೆಗೆ ಮಹಜರ್ ಕ್ರಮವನ್ನು ಜರುಗಿಸಿ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಸದರಿ ಸಾರಾಯಿ ಪೌಚುಗಳ ಪೈಕಿ 90 ಎಂ.ಎಲ್ ನ ವಿಂಡ್ಸರ್ ಡೀಲಕ್ಸ್

ವಿಸ್ಕಿಯ 16 ಪೌಚುಗಳು, ಹಾಗೂ 90 ಎಂ.ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 12 ಟೆಟ್ರಾ ಪ್ಯಾಕೆಟುಗಳು ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ ಎನ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇವೆ. ನಂತರ ಆರೋಪಿಯನ್ನು ಮಾಲುಗಳ ಸಮೇತ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ.

ನ್ಯಾಯಾಲಯದ ಮುಂದೆ ಇರುವ ಮು.ಮ.1 ರಿಂದ 29 ನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ. ಈ ವಿಚಾರವಾಗಿ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**